ಕೂಡ ದಾಟದ ದೊಡ್ಡವ್ವ ಭೂತಕನ್ನಡಿ ಹಾಕಿ ನೋಡುವಷ್ಟು ಇಳಿದು ಹೋಗಿತ್ತು. ಕಣ್ಣು ಬೇರೆ ಕೈಕೊಟ್ಟುಬಿಟ್ಟಿದ್ದವು. ಖಿನ್ನನಾಗಿ ಕಾಲೆಳೆಯಲು ಶುರು ಮಾಡಿದ. ಊರ ಮುಂದಲ ಕೆಂಕೇಸರಿ ಮರದ ಬೊಡ್ಡೆಯ ತುಂಬಾ ಕಾಂಗ್ರೆಸ್ಸಿಗೆ ವೋಟು ಕೊಡಿ, ಜನತಾಕ್ಕೆ ಮತ ನೀಡಿ ಮುಂತಾದ ಪೋಸ್ಟರುಗಳು ಅಂಟಿಕೊಂಡಿದ್ದವು. ಮರದ ಕೊಂಬೆಗೆ ನೇಣು ಬಿಗಿದು ಬ್ಯಾನರುಗಳನ್ನು ನೇತುಬಿಟ್ಟಿದ್ದರು. ಊರ ಮುಂದಿನ ಮರ ಹಾಳು ಸುರಿಯುವ ಪಾರ್ಟಿ ಆಫೀಸಿನ ಮಟ್ಟ ಮುಟ್ಟಿಬಿಟ್ಟಿತ್ತು. ಇದೇ ಕಟ್ಟೆಯ ಮೇಲೆ ಜೊಂಪೆಜೊಂಪೆ ಹೂವು ಕಿತ್ತು ಸಿಂಬಳಸುರುಕಿ ಉಮಿಯ ಜೊತೆಗೆ ದುರುಗವ್ವ ದೇವರ ಆಟವಾಡುತ್ತ ದೇವರು ಕುಣಿಸಿದ್ದು ನೆನಪಾಯಿತು.

ಕೆಂಕೇಸರಿ ಮರದಿಂದ ಮೂರೇ ಹೆಜ್ಜೆ ದೂರಕ್ಕೆ,
ರೈತರ ಅಪ್ಪಣೆಯಿಲ್ಲದೆ ಯಾವುದೇ
ಸರ್ಕಾರಿ ಸಂಬಳದ ನೌಕರರೂ
ಗ್ರಾಮವನ್ನು ಪ್ರವೇಶಿಸಕೂಡದು.
ಭೇಟಿಯ ಕಾಲ ಸಂಜೆ ಆರರಿಂದ ಏಳು.
ಸೋಮವಾರ ರೈತರಿಗೆ ರಜಾದಿನ.

—ಕೊನೇಹಳ್ಳಿ ರೈತಸಂಘ

ಎಂದು ಬರೆಯಲಾಗಿದ್ದ ತಗಡಿನ ಹಸಿರು ಬೋರ್ಡನ್ನು ಎತ್ತಿ ಹಿಡಿದುಕೊಂಡಿದ್ದ ಎಡಗಡೆಯ ಗುಜ್ಜು ಕೆಳಕ್ಕೆ ಬೀಳಲಾಗಿ, ಒಂದೇ ಗುಜ್ಜಿಗೆ ಆತುಕೊಂಡ ಬೋರ್ಡು ಅತ್ತಿತ್ತ ಸುಯ್ಯುವ ಗಾಳಿಗೆ ಡಬಡಬಗುಡುತ್ತಿತ್ತು. ಒಂದೇ ಒಂದು ವರ್ಷದ ಕೆಳಗೆ ದಲಿತರು, ವಕ್ಕಲಿಗರೆನ್ನದೆ ಕೂಡಿ ಹಬ್ಬದ ರೀತಿ ಕಲೆತು ಬೋರ್ಡು ನೆಟ್ಟ ಗಳಿಗೆಯ ಸಡಗರ ಕಣ್ಣಿಗೆ ಬಂತು. ಆ ದಿನಗಳಲ್ಲಿ ತಾಲೂಕಾಫೀಸಿನ ಗುಮಾಸ್ತರುಗಳು, ವಿಲೇಜ್ ಅಕೌಂಟೆಂಟುಗಳು, ತಹಶೀಲ್ದಾರರುಗಳು ಕೂಡ 'ನಿಮ್ಮೂರಿಗೆ ಹೋಗುವುದೆಂದರೆ, ನಿಮ್ಮೂರ ಜನ ಅಂದರೆ ತರಡು ನಡುಗುತ್ತಯ್ಯ' ಅನ್ನುತ್ತಿದ್ದರು. ಒಂದು ಸಲವಂತೂ ಕೊನೇಹಳ್ಳಿಯ ಹುಡುಗರೆಲ್ಲ ಸೇರಿ, ಸದಾ ಹೆಂಡತಿ, ಮಕ್ಕಳನ್ನು ತುಂಬಿಕೊಂಡು ಸರ್ಕೀಟು ಹೊಡೆಯುವ ಅಮಲ್ದಾರರ ಆಫೀಸ್ ಜೀಪಿಗೆ ತಡೆ ಹಾಕಿ ಟೈರಿನ ಗಾಳಿಬಿಟ್ಟು, ಅಮಲ್ದಾರರು ಅಡ್ಡಬಿದ್ದು ದಮ್ಮಯ್ಯಗುಡ್ಡೆ ಹಾಕುವಲ್ಲಿಗೆ ತಂದಿಟ್ಟಿದ್ದರು. ಹೀಗೆ ದಮ್ಮಯ್ಯಗುಡ್ಡೆ ಹಾಕಿ ತಪ್ಪಿಸಿಕೊಂಡು ಹೋದ ಅಮಲ್ದಾರರು ಕೊಬ್ಬೇರಿ ಪೋಲೀಸ್ ವ್ಯಾನು ಕಳಿಸಿದರೆ, ಮುದುಕಿಯರೆನ್ನದೆ ಮಕ್ಕಳೆನ್ನದೆ ಊರಿಂದೂರೇ ಕಿತ್ತು ಹೊರಟು ಕುರಿಕೋಣಗಳನ್ನೆಲ್ಲ ಅಟ್ಟಿಕೊಂಡು 'ಆಕಯ್ಯ ವ್ಯಾನಿಗೆ ದಮ್ಮಿದ್ದರೆ' ಎಂದು ಸಬ್‌ಇನುಸ್ಪೆಕ್ಟರ್ ಅಜ್ಜಪ್ಪನನ್ನು ಮತ್ತೆ ಈ ದಿಕ್ಕಿಗೆ ತಲೆಯಿಕ್ಕಿ ಮಲಗದಂತೆ ಮಾಡಿಬಿಟ್ಟಿದ್ದರು.

ರಾಜಣ್ಣ ಹೆಜ್ಜೆ ಕಿತ್ತಿಕ್ಕಿದ. ಕಾಲಿಕ್ಕಿದಲ್ಲೆಲ್ಲ ಧಗ್ಗಂತ ರಾಚುವ ಚಿನ್ನದ ಬಣ್ಣದ ದೂಳು ಊದರದಂತೆ ಸಣ್ಣಗೆ ಮೇಲಕ್ಕೆದ್ದು ಕಣ್ಣಿಗೆ ಅಮರಿ ಗಂಟಲಾವರಿಸಿಕೊಳ್ಳತೊಡಗಿ ಕೆಮ್ಮಿ ಕ್ಯಾಕರಿಸಿ ಉಗಿದ ಉಗುಳನ್ನು ಬೆಂದ ಮಣ್ಣು ಕಣ್ಣು ಬಿಡುವಷ್ಟರಲ್ಲಿ ಹೀರಿಕೊಂಡುಬಿಟ್ಟಿತು. ಊರಿಗೂರಿಗೇ ಎದ್ದು ಕಾಣುವಂಥ ನಾಡಹೆಂಚಿನ ಮನೆ ಮುಟ್ಟುವ ಹೊತ್ತಿಗೆ ರಾಜಣ್ಣ ಸಾವಿರಾರು ಮೈಲಿ ನಡೆದವನಂತೆ ನಲುಗಿಹೋಗಿದ್ದ.

ಬಾಗಿಲಲ್ಲೇ ಶಿವಣ್ಣಯ್ಯ ಎದುರಾದ. ತಾನು ಪ್ರತಿಸಲ ಬಂದಾಗಲೆಲ್ಲ 'ಪಾಲು ಮಾಡಿಬಿಡಾನ ಕಣಯ್ಯ' ಅಂತ ಗೊಣಗುಟ್ಟುವ ಶಿವಣ್ಣಯ್ಯ, 'ಈಗ ಬಂದ್ಯಾ, ಬಾ' ಎಂದು ಗುನುಗುಟ್ಟಿ ವಲ್ಲಿ ಕೊಡವಿ ನಡೆದುಬಿಟ್ಟ. ರೈತಸಂಘದ ಹಸಿರು ವಲ್ಲಿಯ ಬದಲಿಗೆ ನೀಲಿ ಬಣ್ಣದ ವಲ್ಲಿ